ಮೇರೆಗೆ ನಿಜಕ್ಕೂ ಏನನ್ನು ಮಾಡಲಿಕ್ಕಾಗಿರಲಿಲ್ಲವೋ ಅವನ್ನೆಲ್ಲ ಮಾಡತೊಡಗಿದ್ದಾಯಿತು. ಒಮ್ಮೆಗೇ, ಈ ಅರವತ್ತೈದರ ಹೊಸ್ತಿಲಿನಲ್ಲಿ ಮೂವತ್ತರ ಪ್ರಾಯದ ಮೇರುಸ್ಥಿತಿಯನ್ನು ಕಂಡಂತನಿಸತೊಡಗಿತು. ಇನ್ನು ಮುಂದೆ, ಈ ಬದುಕು ಕುರಿತು ದೂರಲಿಕ್ಕೇನಿಲ್ಲವೆಂದು ಮತ್ತೆ ಮತ್ತೆ ಹೇಳಿಕೊಂಡಂತಾಯಿತು. ಇಷ್ಟಿದ್ದೂ, ದಿವಸಗಳು ವಾರಗಳಾಗಿ ಮಾರ್ಪಟ್ಟು ತಿಂಗಳೆನಿಸುತ್ತಿರುವ ಹೊತ್ತಿಗೆ, ಅಜೀಬೆನಿಸುವ ದುಗುಡವೊಂದು ಮನಸ್ಸೊಳಗೆ ಮೋಡವಾಗಿ ಕವಿಯುವುದು. ಇನ್ನೇನು, ಇವನು ಹೊರಟುಬಿಟ್ಟನೆಂದರೆ, ಬದುಕು ಮುದವೆಂಬುದರ ಮುದ ಬಸಿದು ತೋರಿದ ಪವಾಡವೊಂದು ಮುಗಿದಂತೆಯೇ ಅಲ್ಲವೇ... ಅಂತನಿಸಿ, ಎದೆ ಭಾರವೆನಿಸುವುದು. ಗುಂಡಿಗೆ ಬರಡು ಬರಡಾಗಿ ಕಾಡುವುದು.

ವಾರದ ಹಿಂದೆ 'ಸೀತಾನದಿ'ಯ ಸೇತುವೆಯ ಕೆಳಗೆ, ಹೊಳೆಯ ಬದುವಿನಲ್ಲಿ ಇಬ್ಬರೂ ಕುಳಿತಿರುವಾಗ, ಮುಸ್ಸಂಜೆಯ ಸುಮಾರು. ಹೊತ್ತು ಕಂತುತ್ತಿತ್ತಾಗಿ, ಆಕಾಶವು ಎಗ್ಗಿರದೆ ಕೆಂಪಡರಿಕೊಂಡಿತ್ತು. ನಮ್ಮ ನಡುವಿನ ಮಾತು ಮೇಲಿರುವ ಸೇತುವೆಯ ಬಗ್ಗೆ ಜರುಗಿತ್ತು. 'ಬ್ರಿಟಿಷರ ಕಾಲದ ಸೇತುವೆ... ಬರೇ ಸ್ಟೀಲಿನಿಂದ ಮಾಡಿದ್ದಾರೆ ನೋಡು. ಇವೊತ್ತಿನ ಕಾಂಕ್ರೀಟಿನ ಸೇತುವೆಗಳನ್ನು ನೋಡಿದರೆ, ಇದು ಕಾಲಾತೀತ ಅನಿಸುತ್ತಲ್ಲವಾ? ಒಂದು ನಮೂನೆ ಕಲಾಕೃತಿಯ ಹಾಗನಿಸುತ್ತೆ...' ಎಂದು ನಾನು ಬಣ್ಣಿಸುತ್ತಿರುವಾಗ, ಶ್ರವಣ್, ನನ್ನನ್ನೇ ಬಲು ತಾದಾತ್ಮ್ಯದಿಂದ ನೋಡಿಕೊಂಡುಳಿದ. 'ವಾಟ್ಸ್ ದಟ್? ವೈ ಆರ್ಯು ಗೇಪಿಂಗ್ ಎಟ್ ಮಿ ಲೈಕ್ ದಿಸ್?' ಕೇಳಿದೆ. 'ಈಶ್, ಎಷ್ಟು ಚೆನ್ನಾಗಿ ಹೇಳಿದಿರಿ... ನೀವು ಮಾತಾಡುತಾ ಇದ್ದರೆ ಹಾಗೇ ನಿಮ್ಮನ್ನು ನೋಡಿಕೊಂಡು ಕೇಳಿಕೊಂಡು ಇರೋಣ ಅನಿಸುತ್ತೆ...' ಅಂತಂದ. ಹಿಂದೆಯೇ, 'ಹ್ಞಾಂ... ಕೆನೈ ಜಸ್ಟ್ ಹೋಲ್ಡ್ ಯುವರ್ ಹ್ಯಾಂಡ್, ಇಫ್ ಓಕೆ ವಿತ್ಯು?' ಎಂದು ಕೇಳಿದ. ಬಲಗೈಯನ್ನು ಮುಂದೊಡ್ಡಿದೆ. ನನ್ನ ಅಂಗೈಮುಂಗೈಯನ್ನು ತನ್ನ ಬೊಗಸೆಯಲ್ಲಿ ತಾಳಿ, ಕಣ್ಣು ಮುಚ್ಚಿಕೊಂಡು, 'ಓಹ್ ಗ್ಯಾಡ್... ದಿಸ್ ಈಸ್ ಸೋ ಸೋ ಡಿವೈನ್...' ಅಂತಂದ. ನಾನು ಕೈಕೊಸರಹೋಗುವಾಗ, ಅದನ್ನು ಮತ್ತೂ ಬಿಗಿಯಾಗಿ ತಾಳುತ್ತ, 'ಒನ್ಸೆಕ್ ಒನ್ಸೆಕ್...' ಅಂತಂದು, ನಿಧಾನವಾಗಿ ಕಣ್ಣು ತೆರೆದ. ಇಡೀ ಸೀತಾನದಿಯೇ ಅವನ ಕಣ್ಣುಗಳನ್ನು ತೊಳೆದವೇನೋ ಎಂಬಷ್ಟು ನೀರುಕ್ಕಿಬಂದಿತ್ತು.

ಸೇತುವೆಯಿಂದೆದ್ದು ವಾಪಸು ನಡೆಯುತ್ತಿರುವಾಗ, 'ಈಶ್... ಒಂದು ವಿಷಯ ಹೇಳಲಾ? ಮುಂದಿನ ಹತ್ತು ದಿನಗಳಲ್ಲಿ ನಾನು ಬೆಂಗಳೂರು ಸೇರಿರುತೀನಿ... ಮತ್ತೆ ಕೆಲಸದಲ್ಲಿ ತೊಡಗಿರುತೀನಿ. ಆದರೆ ನನಗೆ ಇಲ್ಲಿಂದ ಹೋಗಬೇಕು ಅಂತಲೇ ಅನಿಸುತಿಲ್ಲಾ... ಎಷ್ಟೋ ಯುಗಗಳ ಸಂಬಂಧ ಇದು ಅನಿಸುತ್ತೆ, ಈಶ್... ಐ ಮೀನಿಟ್!' ಅಂತಂದ. ಹಿಂದೆಯೇ ನನ್ನ ಸೊಂಟ ಬಳಸಿ, ವಯೋಸಹಜವಾಗಿ ಮುಂಜಗ್ಗುವ ನನ್ನ ಡೊಳ್ಳುಹೊಟ್ಟೆಯನ್ನು ಅಳೆಯುವ ಹಾಗೆ, ಮತ್ತು, ಎರಡೂ ತೋಳುಗಳಿಂದ ಹೆಮ್ಮರದ ಕಾಂಡವೊಂದನ್ನು ಅಪ್ಪಿಕೊಳ್ಳುವ ಹಾಗೆ ಹಿಡಿದುಕೊಂಡು, 'ವಾಟೈ ಲೈಕ್ ಅಬೌಟ್ ಯು ಈಸ್ ಯುವರ್ ಪಾಂಚ್!' ಅಂತಂದ. ತುಸುವೇ ಮುಜುಗರವನ್ನಿಸಿತು.

'ಆದರೆ ಶ್ರವಣ್, ನನಗೆ ಈ ಹೊಟ್ಟೆ ಇಷ್ಟವಾಗಲ್ಲ... ಕರಗಿಸೋಕೆ ಎಷ್ಟು ಪ್ರಯತ್ನ ಮಾಡಿ ಸೋತಿದ್ದೀನಿ ಗೊತ್ತಾ?'

'ಕಮ್ಮ್ ಆನ್... ನಿಮಗಿದು ಎಷ್ಟು ಚೆನ್ನಾಗಿ ಹೊಂದುತ್ತೆ, ಗೊತ್ತಾ?'

'.....'